doc-571
T.P-2

Reg No B G 155 18 11 72-

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸುವರ್ಣ ಜಯಂತಿ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಂಗಳೂರಿನಲ್ಲಿ ಕೋರ್ಟಿನಲ್ಲೇ ಚೂರಿ ಇರಿತ

ಮೈಸೂರು ದಸರಾ ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 20-11-1972 ಸೋಮವಾರ

ಕಲಾಕ್ಷೇತ್ರ

6 ರಿಂದ 7-30 ಸಂಜೆ	ಶ್ರೀಮತಿ ಎಸ್. ಉಷಾ, ಬೆಂಗಳೂರು	ಸಂಗೀತ
7 ರಿಂದ 9-30	ಶ್ರೀಮತಿ ಪಾಪಚೂಡಾಮಣಿ, ಬೆಂಗಳೂರು	ಸಂಗೀತ

★

ಜೀವನರಂಗ ನಕಟ್ಟೆ

7 ರಿಂದ 8	ಶ್ರೀಮತಿ ಎಸ್. ಭಾಗ್ಯಲಕ್ಷ್ಮಿ, ಬೆಂಗಳೂರು	ಸಂಗೀತ
8 ರಿಂದ 9-30	ಸರಸ್ವತಿ ನೃತ್ಯ ಕಲಾಮಂದಿರ, ಮೈಸೂರು	ನೃತ್ಯ

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

★

ಚಲಚಿತ್ರ ಕೆಲಸಗಾರರ ಸಂಬಳ

ಬೆಂಗಳೂರು— ಏನಿಮಾ ಕೆಲಸಗಾರ ಸಂಘ ಚಲಚ್ಚಿತ್ರ ಸಂಬಳ ಸಮಿತಿಗೆ ಕೊಟ್ಟ ಮನವಿಯಲ್ಲಿ ಈ ರೀತಿ ಸಂಬಳ ಕೇಳಿಕೆ ಹಾಕಿರುವರು— ಗೇಟ್‌ಕೀಪರ್‌ಗೆ ರೂ 250, ಮುರಗೆಲಸದವನಿಗೆ 275. ಎಟೆಕ್ಟ್ರಿಷಿಯ್ಯನ್‌ಗೆ 300, ಚೀಫ್ ಆಪರೇಟರಿಗೆ 500, ಒಂದನೆ ಆಪರೇಟರಿಂಗೆ 450. ಎರಡನೇ ಆಪರೇಟರಿಗೆ 400, ಮೂರನೇ ಆಪರೇಟರಿಂಗೆ 350, ಅಸಿಸ್ಟೆಂಟ್ ಮ್ಯಾನೇಜರ್‌ಗೆ 650, ಮ್ಯಾನೇಜರ್‌ಗೆ 950— ಕೆಲಸದ ನೇಳೆ 8 ಗಂಟೆಗಳಿಗೆ ಪರಿಸಡಿಸಲೂ ಕೇಳಿರುವರು.

★

ಹೆಸರು ಬದಲಾವಣೆ

ನವದೆಹಲಿ- ಅಂಡಮಾನ್, ನಿಕೋಬಾರ್ ದ್ವೀಪಗಳ ಹೆಸರನ್ನು, ಷಾಹೀದ್ ಮತ್ತು ಸ್ವರಾಜ್ ದ್ವೀಪಗಳೆಂದು ಬದಲಾಯಿಸುವ ಮಸೂದೆ ಲೋಕಸಭೆಯಲ್ಲಿ ತರಲಾಗಿದೆ.

121 ದಿನಗಳ ಉಪವಾಸ

ಬೆಂಗಳೂರು— ವಿಶ್ವಶಾಂತಿಗಾಗಿ, ಕೇವಲ ಬಿಸಿನೀರು ಕುಡಿಯುತ್ತಾ, 121 ದಿನಗಳ ಉಪವಾಸಕ್ಕೆ ಕೈಗೊಂಡಿದ್ದ ಶ್ರೀಮತಿ ಧಾನ್ಯಾ ಬೈಜನರಾಜ್‌ರವರು ತಾ || 22 ರಂದು ಲಾಲ್‌ಬಾಗ್ ಗ್ಲಾಸ್ ಹೌಸ್‌ನಲ್ಲಿ ಗೌರ್ನರ್ ಸುಖಾಡಿಯರರರ ಅಧ್ಯಕ್ಷತೆಯಲ್ಲಿ ಉಪವಾಸ ಪರಿಸಮಾಪ್ತಿ ಗೊಳಿಸುವರು

★

9 ಪೋಲೀಸು ನಾಯಿಗಳು

ತಿರುವೆಂಡ್ರಂ— ಕೇರಳ ರಾಜ್ಯದ ಪೋಲೀಸು ನಾಯಿ ಪಡೆಯಲ್ಲಿ 9 ನಾಯಿಗಳಿದ್ದು, ಅವುಗಳನ್ನು ಸೋಡಿಕೊಳ್ಳಲು ಒಬ್ಬ ಸಬ್‌ಇನ್ಸ್‌ಪೆಕ್ಟರು ಮತ್ತು ಒಬ್ಬ ಅಡಿಗೆಯವನ್ನು ಸೇರಿ 15 ಜನರಿದ್ದಾರೆ: ನಾಯಿಗಳಿಗೆ ದಿನಕೆ ತಲಾ ರೂ. 4-50 ಖರ್ಚಾಗುತ್ತಿದ್ದರೆ ಇದರಿಗೆ ಅದರೆರಡರಷ್ಟಾಗುವುದು ; ಇವರ ಸಂಬಳದ ವಾರ್ಷಿಕ ಬಿಲ್ಲು ರೂ. 49000 ಕ್ಕೆ ಸ್ವಲ್ಪ ಹೆಚ್ಚಾಗುತ್ತದೆ. ಈ ವಿಷಯ ಶಾಸನಸಭೆಯಲ್ಲಿ ತಿಳಿಸಲಾಯಿತು.

★

ಕೋರ್ಟಿನಲ್ಲೇ ಇರಿತ

ಬೆಂಗಳೂರು— ಒಬ್ಬನ ಮಗನನ್ನು ಕೊಂದ ಆಪಾದನೆಗೆ 7 ಮಂದಿಗೆ 10 ವರ್ಷಗಳ ಸಜಾ 1000 ರೂ.ಗಳ ಜುಲ್ಮಾನೆಯನ್ನು ಸೆಷನ್ ಜಡ್ಜರು ವಿಧಿಸಿದ್ದರು: ಹೈಕೋರ್ಟಿನಲ್ಲಿ ಮಾಡಲ್ಪಟ್ಟ ಅಪೀಲಿನಲ್ಲಿ ಅವರೆಲ್ಲರನ್ನೂ ಬಿಡುಗಡೆ ಮಾಡಲಾಯಿತು – ಕ್ರೋಧಗೊಂಡ ತಂದೆ ತಮ್ಮವರಲ್ಲಿ ಇಬ್ಬರನ್ನು ಚೂರಿಯಿಂದ ಇರಿದನು ; ಅವರನ್ನು ಆಸ್ಪತ್ರೆಗೆ ಕಳುಹಿಸಿ, ಇವನನ್ನು ಪೋಲೀಸರ ವಶಪಡಿಸಲಾಯಿತು

★

ವಸ್ತುಪ್ರದರ್ಶನ ತಾ || 26 ರ ವರೆವಿಗೆ

ಮೈಸೂರು— ವಸ್ತುಪ್ರದರ್ಶನವನ್ನು ತಾ || 26 ಭಾನುವಾರದವರೆಗೂ ಮುಂದುವರಿಸಲಾಗಿದೆ.

ಪರಿಸಮಾಪ್ತಿ – ಬಹುಮಾನ ವಿನಿಯೋಗ

ಮೈಸೂರು— ದಸರಾ ವಸ್ತುಪ್ರದರ್ಶನದ ಕಲಾಕ್ಷೇತ್ರದಲ್ಲಿ ತಾ || 21 ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಆರೋಗ್ಯ ಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಬಹುಮಾನ ವಿನಿಯೋಗ ಮಾಡುವರು ಮತ್ತು ಪರಿಸಮಾಪ್ತಿ ಭಾಷಣಮಾಡುವರು. ಕಾರ್ಮಿಕ, ಸಾರಿಗೆ ಮತ್ತು ಪ್ರವಾಸ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು ಅಧ್ಯಕ್ಷತೆ ವಹಿಸುವರು.

★

ಪಾರ್ಸಲ್‌ಗಳಲ್ಲಿ ಜೇಳುಗಳು

ಬೆಂಗಳೂರು— ಇಲ್ಲಿಯ ವಾಪಸ್ ಕಾಗದಗಳ ಅಂಜೇಕಚೇರಿಯು ಸಾಧಾರಣ ಪೋಸ್ಟು ಪಾರ್ಸಲ್‌ಗಳ ಮೇಲೆ ಸರಿಯಾದ ವಿಳಾಸ ಪತ್ತೆ ಮಾಡುತ್ತಿದ್ದಾಗ, ಅವುಗಳಲ್ಲಿ ಜೀವಿತ ಜೇಳುಗಳು, ಪವಿತ್ರ ನೀರಿನಲ್ಲಿ ಮುಳುಗಿಸಲು "ಅಸ್ಥಿ" ಗಳು, ಚಪ್ಪಲಿಗಳು, ಪ್ರಸಾದಗಳು, ಸಿಗರೇಟು ತುಂಡುಗಳೂ ಕಂಡುಬಂದಿವೆ.

●

ಚಲಚಿತ್ರ ಮಂದಿರದ ಶಂಕುಸ್ಥಾಪನೆ

ಚಿಕ್ಕಜೋಗಿಹಳ್ಳಿ— ಚಲಚಿತ್ರ ಮಂದಿರದ ಅಸ್ತಿಭಾರತಿಲೆ ಸ್ಥಾಪಿಸುತ್ತಾ, ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು, ಚಲಚಿತ್ರಗಳು ಸಾಮಾಜಿಕ ಶಿಕ್ಷಣದ ಮಾಧ್ಯಮವಾಗಿರಬೇಕೆಂದು ಹೇಳಿದರು.

○

ಗೋಹತ್ಯ ನಿರೋಧ

ನವದೆಹಲಿ— ಗೋಹತ್ಯ ನಿರೋಧದ ಖಾಸಗೀ ಮಸೂದೆಯನ್ನು ಲೋಕಸಭೆಯಲ್ಲಿ ಜನಸಂಘದ ಸದಸ್ಯ ಶ್ರೀ ಮೋರ್ಹ ತಂದರು ; ಅನೇಕರು ಬೆಂಬಲವಿತ್ತರು ; ಒಬ್ಬಬ್ಬರು ವಿರೋಧಿಸಿದರು.

● ಪಂಕಿಸ್ತಾನದಲ್ಲಿ 600 ಮಂದಿ ಭಾರತದ ಯುದ್ಧ ಖೈದಿಗಳಿರುವರೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ಹಣ ಮತ್ತು ಗಡಿಯಾರಗಳ ವಶ

ಬಿಜಾಪುರದಲ್ಲಿ ಒಂದು ಕಿರಾಣಿ ಅಂಗಡಿಯಲ್ಲಿ ಎಕ್ಸೈಜು ಅಧಿಕಾರಿಗಳು ರೂ. 70000 ಕರೆನ್ಸಿ ನೋಟುಗಳನ್ನು 50 ಕೈಗಡಿಯಾರಗಳನ್ನು ವಶಪಡಿಸಿಕೊಂಡರು.

★

ದಿವ್ಯವಾಣಿ

ಹೊಗಳಿಕೆ ಯೋಗ್ಯತೆಯ ತಳಪಾಯವಲ್ಲ ; ಆದರೆ ಹೊಗಳಿಕೆ ಇದ್ದಲ್ಲಿ ಯೋಗ್ಯತೆ ಇದ್ದರೂ ಇರಬಹುದು. — ಕಾರ್ಲೈಲ್

ವುಡ್‌ಲಾಂಡ್ಸ್ ಆಮೋಘ 8 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ — ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೇರಾ 17 11 72 ರಿಂದ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಶಾದಿ ಕೆ ಬಾದ್

ಪಾತ್ರ : ಜಿತೇಂದ್ರ, ರಾಖಿ, ಶತ್ರುಘ್ನಸಿನ್ಹಾ, ನಾಜ್ ಮತ್ತು ಶ್ಯಾಮ

ಸಂಗೀತ — ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅನನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಅನೆ-ಹುಡುಗ

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ

Edited Printedand Published by Dharmapracharaniratа M S Krishna Rao (Propretor) at the Satyavad. Press, Chamarajapuram Mysore

ಮೈಸೂರು ದಸರಾ ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 19-11-72 ಭಾನುವಾರ

ಕಲಾಕ್ಷೇತ್ರ

5-30 ರಿಂದ 7 ಸಂಜೆ	ಶ್ರೀ ಹೆಚ್. ವಿ. ಕೃಷ್ಣಮೂರ್ತಿ, ಶ್ರೀ ಎ ವೀರಭದ್ರಯ್ಯ ಮತ್ತು ಶ್ರೀ ಅನೂರ್ ರಾಮಕೃಷ್ಣ, ಬೆಂಗಳೂರು	ಸಂಗೀತ
7 ರಿಂದ 9-30	ಶ್ರೀ ಎಂ. ಪಿ. ಶಂಕರ್, ಮೈಸೂರು ವಿಶೇಷ ಕಾರ್ಯಕ್ರಮ " ಕನ್ನಡದ ಕಡುಗಲಿ "	

ಜೀವನರಾಯನಕಟ್ಟೆ

7 ರಿಂದ 8	ಶ್ರೀ ಸಂಜೀವ ಮೂರ್ತಿ, ಮೈಸೂರು	ಲಾವಣಿ
8 ರಿಂದ 9-30	ಶ್ರೀಮತಿ ರಾಧ ಶ್ರೀಧರ್, ಬೆಂಗಳೂರು	ನೃತ್ಯ

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

SHAKTI SUDHA

A Superb Tonic

Help The Gorakshana

—Humanitarian Propoganda Monthly....

Protect the Cow

Contribute Liberally to the National Defence Fund